# ಶ್ರವಣ ತರಬೇತಿಯ ಅವಲೋಕನ



**ಎಲ್ಲರೂ ಒಂದಾಗಿ ಪರಿಣಾಮಕಾರಿ ಸಂವಹನಕ್ಕೆ ಶ್ರಮಿಸುವ**

ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ
ಮಾನಸಗಂಗೋತ್ರಿ
ಮೈಸೂರು 570006

ಶ್ರವಣ ತರಬೇತಿಯನ್ನು ಶ್ರವಣದೋಷವುಳ್ಳ ಮಕ್ಕಳಿಗೆ ಶ್ರವಣ ಶಕ್ತಿಯನ್ನು ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿಉಪಯೋಗಿಸಲು ಬಳಸಲಾಗುತ್ತದೆ. ಈ ತರಬೇತಿಯನ್ನು ಯಾವ ಮಕ್ಕಳಿಗೆ ಸಾಧ್ಯವಾದಷ್ಟು ಬೇಗನೆ ಉಪಯುಕ್ತವಾದ ಶ್ರವಣ ಸಾಧನವನ್ನು ಅಥವಾ ಕಾಕ್ಲಿಯರ್ ಇಂಪ್ಲಾಂಟನ್ನು ಅಳವಡಿಸಿರುತ್ತಾರೋ ಅವರಿಗೆ ಕೊಡಲಾಗುತ್ತದೆ. ಸಾಮಾನ್ಯವಾಗಿ ಶ್ರವಣ ತರಬೇತಿಯನ್ನು, ಮಾತನ್ನು ಸಾಕಷ್ಟು ಅರ್ಥಮಾಡಿಕೊಳ್ಳುವ ಮಕ್ಕಳಿಗೆ ಸೂಚಿಸಲಾಗುತ್ತದೆ.

**ಶ್ರವಣ ತರಬೇತಿ ಶ್ರವಣ ದೋಷವುಳ್ಳ ಮಕ್ಕಳಿಗೆ ಈ ಕೆಳಕಂಡಂತೆ ಸಹಾಯವಾಗುತ್ತದೆ:**

- ಶ್ರವಣ ಸಂಕೇತಗಳಿಗೆ ಗಮನಕೊಡಲು ಮತ್ತು ಕೇಳುವ ಕೌಶಲಗಳನ್ನು ಉತ್ತಮಗೊಳಿಸಲು,
- ಮಾತಿನ ಮೂಲಕ ಪರಿಣಾಮಕಾರಿಯಾಗಿ ಸಂವಹನ ಮಾಡಲು,
- ಶಾಲೆಗಳಲ್ಲಿ ಪರಿಣಾಮಕಾರಿಯಾಗಿ ಕೆಲಸ ಮಾಡಲು ಮತ್ತು
- ಪ್ರಸ್ತುತ ವಿಶ್ವದ ಪರಿಸ್ಥಿತಿಯಲ್ಲಿ ಪರಿಣಾಮಕಾರಿಯಾಗಿ ಕೆಲಸಮಾಡಲು.

**ಶ್ರವಣ ತರಬೇತಿಯ ಪ್ರಮುಖ ಹಂತಗಳು:**




**ಶ್ರವಣದ ಅರಿವು:** ಶಬ್ದವಿದೆಯೇ ಅಥವಾ ಇಲ್ಲವೇ ಎಂಬುದನ್ನು ಸೂಚಿಸಿ.




**ಶ್ರವಣದ ವಿವೇಚನೆ:** ಶಬ್ದಗಳು ಒಂದೆಯೇ ಅಥವಾ ಬೇರೆಯದೇ ಎಂಬುದನ್ನು ಸೂಚಿಸಿ.




**ಶ್ರವಣದ ಪರಿಗಣನೆ:** ವಸ್ತುವನ್ನು ಹೆಸರಿಸುವುದು ಅಥವಾ ಹೇಳಿದ ವಸ್ತುವನ್ನು ಗುರುತಿಸುವುದು.




**ಶ್ರವಣದ ಗ್ರಹಿಕೆ:** ಕೇಳಿಸಿಕೊಂಡು ಹೇಳಿದ್ದನ್ನು ಅರ್ಥಮಾಡಿಕೊಳ್ಳಿ

- ಶ್ರವಣ ತರಬೇತಿಯ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ನಿಮ್ಮ ಶ್ರವಣ ತಜ್ಞರನ್ನು ಸಂಪರ್ಕಿಸಿ.
- ನಿಮ್ಮ ಮಗು ಮನೆಯಲ್ಲಿ ಕೂಡ ಶ್ರವಣ ತರಬೇತಿ ಪಡೆಯುವುದೆಂದು ಖಚಿತ ಪಡಿಸಿಕೊಳ್ಳಿ.
- ದೈನಂದಿನ ಜೀವನದ ಸಂದರ್ಭಗಳಲ್ಲಿ ಮಗುವು ಕೇಳಿಸಿಕೊಳ್ಳುವುದನ್ನು ಬಳಸಲು ಪ್ರೋತ್ಸಾಹಿಸಿ.
- ನಿಮಗೆ ಯಾವುದೇ ಪ್ರಶ್ನೆ / ಅಭಿಪ್ರಾಯ ಅಥವಾ ಸಹಾಯ ಬೇಕಾದಲ್ಲಿ ನಿಸ್ಸಂಕೋಚವಾಗಿ ನಮ್ಮನ್ನು ಸಂಪರ್ಕಿಸಬಹುದು.

ಶ್ರವಣ ವಿಜ್ಞಾನ ವಿಭಾಗ
ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು – ೫೭೦೦೦೬

**Phone no :** 0821-2502000, 2502100 ,2502704
**Toll free no : 1800 425 5218 Fax : 2510515**
**Email :** director@aiishmysore.in
**Website:** www.aiishmysore.in
**Working hours :** 9:00 am to 5:30 pm - Monday to Friday
(Except on Central Govt. Holidays)

*Developed by Prof. Asha Yathiraj & Ms. Chandni Jain*
*Designed by the Department of Material Development/2013*
*Translated by: Ms. R. Rajalakshmi & Dr. Ramadevi K.J. Sreenivas*